KAKP410015312022

# ಪ್ರಧಾನ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಗಂಗಾವತಿ

ಉಪಸ್ಥಿತರುಃ **ಶ್ರೀ.ನಾಗೇಶ ಪಾಟೀಲ**
ಬಿ.ಕಾಂ.ಎಲ್.ಎಲ್.ಬಿ.
ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಗಂಗಾವತಿ.

ದಿನಾಂಕಃ 01 ನೇ ಜುಲೈ 2026 ರಂದು ಉಚ್ಚರಿಸಲ್ಪಟ್ಟಿತು

## ಅಪರಾಧಿಕ ಪ್ರಕರಣ ಸಂಖ್ಯೆಃ 975/2022

**ಪಿರ್ಯಾದಿ:** **1)** ಕರ್ನಾಟಕ ಸರ್ಕಾರ
ಗಂಗಾವತಿ ಗ್ರಾಮೀಣ ಪೋಲಿಸ ಠಾಣೆ

(ಮಾನ್ಯ ಸ.ಸ.ಅ. ರವರ ಮುಖಾಂತರ)

**ವಿರುದ್ಧ**

**ಆರೋಪಿತರುಃ** **1)** ಶರಣಪ್ಪ ತಂದೆ ರುದ್ರಪ್ಪ ಯಲಿಗಾರ,
ವಯಃ **32** ವರ್ಷ, ಉಃ ಒಕ್ಕಲುತನ,
ಸಾಃ ದಾಸನಾಳ, ತಾಃ ಗಂಗಾವತಿ, ಜಿಃ ಕೊಪ್ಪಳ.

**2)** ಪ್ರಕಾಶ ತಂದೆ ರುದ್ರಪ್ಪ ಯಲಿಗಾರ,
ವಯಃ **25** ವರ್ಷ, ಉಃ ಒಕ್ಕಲುತನ,
ಸಾಃ ಹಣವಾಳ, ತಾಃ ಗಂಗಾವತಿ, ಜಿಃ ಕೊಪ್ಪಳ.

| | |
|---|---|
| ಅಪರಾದ ನಡೆದ ದಿನಾಂಕ | **25-12-2021** |
| ಅಪರಾದ ವರದಿಯಾದ ದಿನಾಂಕ | **25-12-2021** |
| ದೋಷಾರೋಪಣಾ ಪಟ್ಟಿ ಸಲ್ಲಿಸಿದ ದಿನಾಂಕಃ | **05-05-2022** |

| | |
|---|---|
| ದೋಷಾರೋಪಣಾ ಮಾಡಿದ ದಿನಾಂಕಃ | **01-09-2023** |
| ಸಾಕ್ಷಿ ಪ್ರಾರಂಭವಾದ ದಿನಾಂಕ | **17-06-2026** |
| ತೀರ್ಪಿಗೆ ಕಾಯ್ದಿರಿಸಲಾದ ದಿನಾಂಕಃ | **01-07-2026** |
| ತೀರ್ಪಿನ ದಿನಾಂಕಃ | **01-07-2026** |

| Rank of the accused | Name of the Accused | Date of Arrest | Date of Release on Bail | Offences Charged with | Whether Acquitted or Convicted | Sentence Imposed | Period of Detention Undergone during trial for purpose of Sec.428 of the Cr.PC |
|---|---|---|---|---|---|---|---|
| 02 | Sharanappa and another one | 25-12-2021 | 01-09-2023 | 447, 341, 323, 354(A)(2), 504, 506 R-w sec. 34 of IPC | Acquitted | -- | -- |

**ತೀರ್ಪು**

ಆರೋಪಿತರು ಭಾ.ದಂ.ಸಂ.ಕಲಂ **447, 341, 323, 354(ಎ)(2), 504, 506** ಸಹ ಕಲಂಃ **34** ರಡಿಯಲ್ಲಿ ಅಪರಾಧ ಎಸಗಿದ್ದಾರೆಂದು ಆರೋಪಿಸಿ ಠಾಣಾಧಿಕಾರಿ, ಗಂಗಾವತಿ ಗ್ರಾಮೀಣ ಪೋಲಿಸ ಠಾಣೆ ಇವರು ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

**2) ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆಃ**

ಅ) ಗಂಗಾವತಿ ಗ್ರಾಮೀಣ ಪೋಲಿಸ ಠಾಣಾ ವ್ಯಾಪ್ತಿಯ ದಾಳನಾಳ ಗ್ರಾಮ ಸೀಮಾದಲ್ಲಿ ದಿನಾಂಕಃ 25-12-2021 ರಂದು ಬೆಳಗ್ಗೆ 8-30 ಗಂಟೆ ಸುಮಾರಿಗೆ ಚಾಸಾ-1/ ಫಿರ್ಯಾದಿದಾರಳು ತಮ್ಮ ಮಾಲೀಕತ್ವದ ಜಮೀನು ಸರ್ವೆ ನಂ.23/1/1 ವಿಸ್ತೀರ್ಣ 03 ಎಕರೆ 10 ಗುಂಟೆ ಜಮೀನಿನಲ್ಲಿ ತನ್ನ ಪತಿಯಾದ ಚಾಸಾ-4 ರವರೊಂದಿಗೆ ಕೂಡಿಕೊಂಡು ಕೆಲಸ ಮಾಡುತ್ತಿರುವಾಗ, ಚಾಸಾ-1 ರವರ ಸಂಬಂಧಿಕರಾದ ಆರೋಪಿ ನಂ. 1 ಮತ್ತು 2 ರವರು ಸಮಾನ ಉದ್ದೇಶದಿಂದ ಕೂಡಿಕೊಂಡು ಸದರಿ ಜಮೀನಿನಲ್ಲಿ ಅತಿಕ್ರಮ ಪ್ರವೇಶ ಮಾಡಿ ಈ ಜಮೀನು ನಮ್ಮದು ಇರುತ್ತದೆ ಇಲ್ಲಿ ಏನು ಸೆಂಟಾ ಕೆಲಸ ಮಾಡುತ್ತಿರಿ ಅಂತಾ ಬೈದಾಡಿದಾಗ, ಚಾಸಾ-1 ಮತ್ತು 4 ರವರು ಈ ಜಮೀನು ನಮ್ಮದು ನಾವು ಗದ್ದೆ

ಕೆಲಸ ಮಾಡುತ್ತೇವೆ ಅದನ್ನು ಕೇಳಲು ನಿವ್ಯಾರು ಅಂತಾ ಅಂದಿದ್ದಕ್ಕೆ ಆರೋಪಿ ನಂ. 1 ಮತ್ತು 2 ರವರು ಕೂಡಿಕೊಂಡು ಚಾಸಾ-4 ರವರನ್ನು ಅಕ್ರಮವಾಗಿ ತಡೆದು ನಿಲ್ಲಿಸಿ ನೀನ್ಯಾವ ಸೂಳೇಮಗ ಇಲ್ಲಿ ನಿನ್ನದೇನು ಕೆಲಸ ಅಂತಾ ಹೇಳಿ ಕೆಳಗೆ ಬಿಳಿಸಿ ಒದೆಯುತ್ತಿರುವಾಗ, ಬಿಡಿಸಲು ಬಂದ ಚಾಸಾ-1 ಇವಳಿಗೆ ಆರೋಪಿ ನಂ.1 ಮತ್ತು 2 ರವರು ಕೂಡಿಕೊಂಡು ಅವರ ಮೈ, ಕೈ ಮುಟ್ಟಿ ಎಳೆದಾಡಿ, ಹೊಡೆಬಡಿ ಮಾಡಿ ಮಹಿಳೆಗೆ ಮಾನಕ್ಕೆ ಕುಂದುಂಟಾಗುವ ರೀತಿಯಲ್ಲಿ ಲೈಂಗಿಕ ಉದ್ದೇಶ ತಾಗದೆ ಮಾಡಿ ಆರೋಪಿತರು ಚಾಸಾ-1 ರವಳಿಗೆ ಹಾಗೂ ಚಾಸಾ-4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿದ್ದು ಇರುತ್ತದೆ.

ಆ) ಸದರಿ ಪಿರ್ಯಾದಿಯ ಸಾರಾಂಶದ ಮೇಲೆ ಭಾ.ದಂ.ಸಂ. ಕಲಂ 447, 341, 323, 354(ಎ)(2), 504, 506 ಸಹಕಲಂಃ 34 ರಡಿಯಲ್ಲಿ ಪ್ರಕರಣ ದಾಖಲಿಸಿ, ತನಿಖೆಯ ನಂತರ ತನಿಖಾಧಿಕಾರಿಗಳು ದೋಷಾರೋಪಣೆ ಪತ್ರ ಸಲ್ಲಿಸಿರುತ್ತಾರೆ.

**3)** ದೋಷಾರೋಪಣಾ ಪತ್ರ ಸಲ್ಲಿಸಿದ ನಂತರ ಅದನ್ನು ಪರಿಶೀಲಿಸಿ ಅಪರಾಧದ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು**,** ಸಮನ್ಸ ನೀಡಲಾಗಿರುತ್ತದೆ**.** ಆರೋಪಿತರು ಮಾನ್ಯ ನ್ಯಾಯಾಲಯದಿಂದ ಹೊರಡಿಸಿದ ಸಮನ್ಸಗೆ ಉತ್ತರವಾಗಿ ನ್ಯಾಯಾಲಯದ ಮುಂದೆ ಹಾಜರಾಗಿ ಜಾಮೀನು ಪಡೆದಿರುತ್ತಾರೆ**.** ನಂತರ ಆರೋಪಿತರಿಗೆ ದಂಡ ಪ್ರಕ್ರಿಯಾ ಸಂಹಿತೆ **1973** ರ ಕಲಂ **207** ರಲ್ಲಿ ತಿಳಿಸಿರುವಂತೆ ದೋಷಾರೋಪಣೆ ಪತ್ರದ ನಕಲುಗಳನ್ನು ಪೂರೈಸಲಾಗಿರುತ್ತದೆ**.**

**4)** ತದನಂತರ ಆರೋಪಿತರ ಪರ ಹಾಗೂ ಅಭಿಯೋಜನೆಯವರ ವಾದವನ್ನು ಕೇಳಿ ಆರೋಪಿತರ ವಿರುದ್ದ ದೋಷಾರೋಪಣೆ ರಚಿಸಿ**,** ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿದಾಗ**,** ಅದನ್ನು ತಿಳಿದುಕೊಂಡು ಆರೋಪಿತರು ತಾವು ಅಪರಾಧ ಮಾಡಿಲ್ಲಾ ವಿಚಾರಣೆಯಾಗಬೇಕು ಎಂದು ಕೇಳಿಕೊಂಡಿರುತ್ತಾರೆ**.**

**5)** ಆರೋಪಿತರ ಮೇಲಿನ ದೋಷಾರೋಪಣೆಯನ್ನು ರುಜುವಾತು ಪಡಿಸಲು ಅಭಿಯೋಜನೆಯವರು ಚಾಸಾ**-1** ಫಿರ್ಯಾದಿ ಇವಳನ್ನು ಪ್ರಾಸಾ**-1** ಅಂತಾ ಹಾಗೂ ಚಾಸಾ**-4** ಪ್ರತ್ಯೇಕ್ಷ ಸಾಕ್ಷಿ ಇವರನ್ನು ಪ್ರಾಸಾ**-2** ಅಂತಾ ವಿಚಾರಣೆಗೆ ಒಳಪಡಿಸಿರುತ್ತಾರೆ**.** ಅವರು ತಮ್ಮ ಪ್ರಕರಣಕ್ಕೆ ವಿರುದ್ದವಾಗಿ ಸಾಕ್ಷಿ ನುಡಿದು ಆರೋಪಿತರ ಕೃತ್ಯವನ್ನು ಅಲ್ಲಗೆಳೆದಿರುತ್ತಾರೆ**.** ಆದ್ದರಿಂದ ದೋಷಾರೋಪಣೆ ಪತ್ರದ ಇತರೇ ಸಾಕ್ಷಿಗಳಿಗೆ ಸಮನ್ಸ

ನೀಡುವಂತೆ ಮಾನ್ಯ ಸ.ಸ.ಅ.ರವರು ಮಾಡಿದ ಮನವಿಯನ್ನು ತೀರಸ್ಕರಿಸಲಾಗಿರುತ್ತದೆ. ಅಭಿಯೋಜನೆಯ ಸಾಕ್ಷಿಗಳಲ್ಲಿ ಆರೋಪಿತರ ವಿರುದ್ದ ಯಾವುದೇ ಸಾಕ್ಷ್ಯಾಧಾರಗಳು ಕಂಡು ಬಾರದ ಕಾರಣ, ದಂಡ ಪ್ರಕ್ರಿಯಾ ಸಂಹಿತೆಯ ಕಲಂ **313** ರಡಿಯಲ್ಲಿ ಪಡೆಯಬೇಕಾದ ಆರೋಪಿತರ ಹೇಳಿಕೆಗಳನ್ನು ವಿನಾಯತಿಗೊಳಿಸಲಾಗಿರುತ್ತದೆ.

**6)** ಆರೋಪಿತರ ಹಾಗೂ ಅಭಿಯೋಜನೆ ಪರ ವಾದವನ್ನು ಕೇಳಲಾಗಿರುತ್ತದೆ. ಮಾನ್ಯ ನ್ಯಾಯಾಲಯದ ಮುಂದೆ ಇರುವ ಕಡತ ಪರಿಶೀಲಿಸಲಾಗಿರುತ್ತದೆ.

**7)** ಈಗ ಮಾನ್ಯ ನ್ಯಾಯಾಲಯವು ನಿರ್ಧರಿಸಲ್ಪಡುವ ಅಂಶಗಳೆಂದರೆ,

**ಅಂಶಗಳು**

**1)** ಗಂಗಾವತಿ ಗ್ರಾಮೀಣ ಪೋಲಿಸ ಠಾಣಾ ವ್ಯಾಪ್ತಿಯ ದಾಳನಾಳ ಗ್ರಾಮ ಸೀಮಾದಲ್ಲಿ ದಿನಾಂಕಃ 25-12-2021 ರಂದು ಬೆಳಗ್ಗೆ 8-30 ಗಂಟೆ ಸುಮಾರಿಗೆ ಚಾಸಾ-1/ ಫಿರ್ಯಾದಿದಾರಳು ತಮ್ಮ ಮಾಲೀಕತ್ವದ ಜಮೀನು ಸರ್ವೇ ನಂ.23/1/1 ವಿಸ್ತೀರ್ಣ 03 ಎಕರೆ 10 ಗುಂಟೆ ಜಮೀನಿನಲ್ಲಿ ತನ್ನ ಪತಿಯಾದ ಚಾಸಾ-4 ರವರೊಂದಿಗೆ ಕೂಡಿಕೊಂಡು ಕೆಲಸ ಮಾಡುತ್ತಿರುವಾಗ, ಚಾಸಾ-1 ರವರ ಸಂಬಂಧಿಕರಾದ ಆರೋಪಿ ನಂ. 1 ಮತ್ತು 2 ರವರು ಸಮಾನ ಉದ್ದೇಶದಿಂದ ಕೂಡಿಕೊಂಡು ಸದರಿ ಜಮೀನಿನಲ್ಲಿ ಅತಿಕ್ರಮ ಪ್ರವೇಶ ಮಾಡಿ ಈ ಜಮೀನು ನಮ್ಮದು ಇರುತ್ತದೆ ಇಲ್ಲಿ ಏನು ಸೆಂಟಾ ಕೆಲಸ ಮಾಡುತ್ತಿರಿ ಅಂತಾ ಬೈದಾಡಿದಾಗ, ಚಾಸಾ-1 ಮತ್ತು 4 ರವರು ಈ ಜಮೀನು ನಮ್ಮದು ನಾವು ಗದ್ದೆ ಕೆಲಸ ಮಾಡುತ್ತೇವೆ ಅದನ್ನು ಕೇಳಲು ನಿವ್ಯಾರು ಅಂತಾ ಅಂದಿದ್ದಕ್ಕೆ ಆರೋಪಿ ನಂ. 1 ಮತ್ತು 2 ರವರು ಕೂಡಿಕೊಂಡು ಚಾಸಾ-4 ರವರನ್ನು ಅಕ್ರಮವಾಗಿ ತಡೆದು ನಿಲ್ಲಿಸಿ ನೀನ್ಯಾವ ಸೂಳೇಮಗ ಇಲ್ಲಿ ನಿನ್ನದೇನು ಕೆಲಸ ಅಂತಾ ಹೇಳಿ ಕೆಳಗೆ ಬಿಳಿಸಿ ಒದೆಯುತ್ತಿರುವಾಗ, ಬಿಡಿಸಲು ಬಂದ ಚಾಸಾ-1 ಇವಳಿಗೆ ಆರೋಪಿ ನಂ.1 ಮತ್ತು 2 ರವರು ಕೂಡಿಕೊಂಡು ಅವರ ಮೈ, ಕೈ ಮುಟ್ಟಿ ಎಳೆದಾಡಿ, ಹೊಡೆಬಡಿ ಮಾಡಿ ಮಹಿಳೆಗೆ ಮಾನಕ್ಕೆ ಕುಂದುಂಟಾಗುವ ರೀತಿಯಲ್ಲಿ ಲೈಂಗಿಕ ಉದ್ದೇಶ ತಾಗದೆ ಮಾಡಿ ಅರೋಪಿತರು ಚಾಸಾ-1 ರವಳಿಗೆ ಹಾಗೂ ಚಾಸಾ-4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **447, 341, 323, 354(ಎ)(2,) 504, 506** ಸಹಕಲಂಃ **34** ಅಡಿಯಲ್ಲಿ ದಂಡನೀಯ ಅಪರಾಧವನ್ನು ಎಸಗಿದ್ದಾರೆಂದು

ಅಭಿಯೋಜನೆಯವರು ಸಂಶಯಾತೀತವಾಗಿ ಸಾಭೀತುಪಡಿಸಿದ್ದಾರೆಯೆ**?**

**2)** ಹಾಗಾದರೇ ಆದೇಶ**/**ಶಿಕ್ಷೆ ಏನು**?**

**8)** ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿದೆ.

ಅಂಶ ಸಂಖ್ಯೆ-1 **:** ನಕಾರಾತ್ಮಕವಾಗಿ

ಅಂಶ ಸಂಖ್ಯೆ-2 **:** ಅಂತಿಮ ಆದೇಶದಂತೆ ಈ ಕೆಳಗೆ ಚರ್ಚಿಸಿದ ಕಾರಣಗಳಿಗಾಗಿ**;**

**ಕಾ ರ ಣ ಗ ಳು**

**9)** **ಅಂಶ ಸಂಖ್ಯೆ-1** ಃ ಫ್ರಾಸಾ-1 ಮತ್ತು 2 ರವರು ತಮ್ಮ ಕೇಸಿಗೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದರೂ, ಮಾನ್ಯ ಸ.ಸ.ಅ.ರವರು ಅಭಿಯೋಜನೆಯ ದಾಖಲಾತಿಗಳ ಮೇಲೆ ಅವಲಂಬಿತರಾಗಿ, ಅಭಿಯೋಜನೆಯು ಆರೋಪಿತರ ಅಪರಾಧವನ್ನು ಸಾಭೀತುಪಡಿಸಿದ್ದು ಕಾನೂನಿನ ಪ್ರಕಾರ ಶಿಕ್ಷಿಸಲು ವಾದ ಮಂಡಿಸಿರುತ್ತಾರೆ.

**10)** ಪ್ರತಿಯಾಗಿ ಆರೋಪಿತರ ಪರ ಮಾನ್ಯ ವಕೀಲರು, ಪ್ರಮುಖ ಸಾಕ್ಷಿದಾರರಾದ ಪಿರ್ಯಾದಿ ಹಾಗೂ ಪ್ರತ್ಯೇಕ್ಷ ಸಾಕ್ಷಿದಾರರು ಯಾವುದೇ ಸಾಕ್ಷ್ಯ ನುಡಿದಿರುವುದಿಲ್ಲ ಹಾಗೂ ಅಭಿಯೋಜನೆಯು ಆರೋಪಿತರ ಅಪರಾಧವನ್ನು ನಿಸ್ಸಂದೇಹವಾಗಿ ರುಜುವಾತುಪಡಿಸಿರುವುದಿಲ್ಲ. ಆದ್ದರಿಂದ ಬಿಡುಗಡೆ ಮಾಡಲು ವಾದ ಮಂಡಿಸಿರುತ್ತಾರೆ.

**11)** ಎರಡು ಕಡೆಯ ವಾದವನ್ನು ಆಲಿಸಿದ ನಂತರ ಕಡತವನ್ನು ಪರಿಶಿಲಿಸಲಾಗಿ, ಅಭಿಯೋಜನೆಯವರು ಸದರಿ ಪ್ರಕರಣವನ್ನು ಸಾಭೀತುಪಡಿಸಲು ಈ ಪ್ರಕರಣದಲ್ಲಿಯ ಪಿರ್ಯಾದಿದಾರಳನ್ನು ಫ್ರಾಸಾ-1 ಅಂತಾ ಹಾಗೂ ಪ್ರತ್ಯೇಕ್ಷ ಸಾಕ್ಷಿದಾರರನ್ನು ಫ್ರಾಸಾ-2 ಅಂತಾ ವಿಚಾರಣೆಗೊಳಪಡಿಸಿಕೊಂಡು ನಿಶಾನೆ ಪಿ-1 ರಿಂದ 3 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

**12)** ಫ್ರಾಸಾ-1 ಫಿರ್ಯಾದಿ ಸಾಕ್ಷಿದಾರಳಾದ ರೋಜಾ ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-2 ಮತ್ತು 3 ಗೊತ್ತು, ಚಾಸಾ-4 ತನ್ನ ಗಂಡ, ಚಾಸಾ-5 ರಿಂದ 8 ಗೊತ್ತಿಲ್ಲ, ಚಾಸಾ-

9 ತನ್ನ ತಂದೆ, ಆರೋಪಿತರ ಪರಿಚಯವಿದೆ, ಆರೋಪಿತರು ತಮ್ಮ ಜಮೀನಿನಲ್ಲಿ ಅತಿಕ್ರಮ ಪ್ರವೇಶ ಮಾಡಿಲ್ಲ, ತನಗೆ ಹಾಗೂ ಚಾಸಾ-4 ರವರಿಗೆ ಅಕ್ರಮ ತಡೆಹೊಡ್ಡಿಲ್ಲ, ತಮ್ಮ ಜೊತೆ ತಂಟೆ ಮಾಡಿಲ್ಲ, ತಮಗೆ ಹೊಡಿ ಬಡಿ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ ಹಾಗೂ ಕೊಲೆ ಬೆದರಿಕೆ ಹಾಕಿರುವುದಿಲ್ಲ, ಈಗ 05 ವರ್ಷಗಳ ತಮ್ಮ ಮತ್ತು ಆರೋಪಿತರ ನಡುವೆ ವೈಮನಸ್ಸು ಉಂಟಾಗಿದ್ದರಿಂದ ತಾವು ಪೋಲಿಸ ಠಾಣೆಗೆ ಹೋದಾಗ ಪೋಲಿಸರು ತಮ್ಮಿಂದ ಒಂದು ದಾಖಲೆಗೆ ಸಹಿ ಪಡೆದುಕೊಂಡಿರುತ್ತಾರೆ, ಸದರಿ ದಾಖೆಯಲ್ಲಿ ಬರೆದಿರುವ ವಿಚಾರ ತನಗೆ ಗೊತ್ತಿಲ್ಲ, ತಾವು ಪೋಲಿಸರಿಗೆ ಯಾವುದೇ ಘಟನಾ ಸ್ಥಳ ತೋರಿಸಿಲ್ಲ, ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ.

**13)** ಪ್ರಾಸಾ-2 ಪ್ರತ್ಯೇಕ್ಷ ಸಾಕ್ಷಿದಾರರಾದ ಮಲ್ಲಿಕಾರ್ಜುನ ಇವರು ತಮ್ಮ ಸಾಕ್ಷ್ಯದಲ್ಲಿ ಚಾಸಾ-1 ತನ್ನ ಹೆಂಡತಿ, ಚಾಸಾ-2 ಮತ್ತು 3 ಗೊತ್ತು, ಚಾಸಾ-4 ತನ್ನ ಗಂಡ, ಚಾಸಾ-5 ರಿಂದ 8 ಗೊತ್ತಿಲ್ಲ, ಚಾಸಾ-9 ತನ್ನ ಮಾವ, ಆರೋಪಿತರ ಪರಿಚಯವಿದೆ, ಆರೋಪಿತರು ತಮ್ಮ ಜಮೀನಿನಲ್ಲಿ ಅತಿಕ್ರಮ ಪ್ರವೇಶ ಮಾಡಿಲ್ಲ, ತನಗೆ ಹಾಗೂ ಚಾಸಾ-4 ರವರಿಗೆ ಅಕ್ರಮ ತಡೆಹೊಡ್ಡಿಲ್ಲ, ತಮ್ಮ ಜೊತೆ ತಂಟೆ ಮಾಡಿಲ್ಲ, ತಮಗೆ ಹೊಡಿ ಬಡಿ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ ಹಾಗೂ ಕೊಲೆ ಬೆದರಿಕೆ ಹಾಕಿರುವುದಿಲ್ಲ, ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ.

**14)** ಅಭಿಯೋಜನೆಯವರು ಪ್ರಾಸಾ-1 ಮತ್ತು 2 ರವರನ್ನು ಪ್ರತಿಕೂಲ ಸಾಕ್ಷಿಗಳು ಎಂದು ಪರಿಗಣಿಸಿ ಮಾನ್ಯ ಸ.ಸ.ಅ.ರವರು ಪಾಟೀ ಸವಾಲು ಮಾಡಿದ್ದರೂ ಸಹಿತ ಆರೋಪಿತರ ವಿರುದ್ದ ಯಾವುದೇ ಸಾಕ್ಷ್ಯವನ್ನು ಅಂದರೆ ಹೇಳಿಕೆಗಳನ್ನು ಅವರ ಪಾಟೀ ಸವಾಲಿನಲ್ಲಿ ಪಡೆದಿರುವುದಿಲ್ಲ. ಅಭಿಯೋಜನಾ ಪ್ರಾಸಾ-1 ರವರು ಪಿರ್ಯಾದಿ ಹಾಗೂ ಪ್ರಾಸಾ**-2** ಪ್ರತ್ಯೇಕ್ಷ ಸಾಕ್ಷಿದಾರರು ತಮ್ಮ ಪ್ರಕರಣಕ್ಕೆ ವಿರುದ್ದವಾಗಿ ಸಾಕ್ಷಿ ನುಡಿದಿದ್ದು ಆರೋಪಿತರ ಕೃತ್ಯವನ್ನು ಅಲ್ಲಗೆಳೆದಿರುತ್ತಾರೆ**.** ಆದ್ದರಿಂದ ದೋಷಾರೋಪಣೆ ಪತ್ರದ ಇತರೇ ಸಾಕ್ಷಿಗಳಿಗೆ ಸಮನ್ಸ ನೀಡುವಂತೆ ಮಾನ್ಯ ಸ**.**ಸ**.**ಅ**.**ರವರು ಮಾಡಿದ ಮನವಿಯನ್ನು ತೀರಸ್ಕರಿಸಲಾಗಿರುತ್ತದೆ**.** ಒಂದು ವೇಳೆ ಸಮನ್ಸ ನೀಡಿದ್ದರೂ ಸಹ**,** ಮಾನ್ಯ ನ್ಯಾಯಾಲಯದ

ಮತ್ತು ಅಧಿಕಾರಿಗಳ ಅಮೂಲ್ಯ ಸಮಯ ಮತ್ತು ರಾಜ್ಯದ ಹಣ ಪೋಲಾಗುವುದು ಹೊರತುಪಡಿಸಿ, ಅಭಿಯೋಜನೆಗೆ ಯಾವುದೇ ಪೂರಕ ಅಂಶಗಳು ಇದ್ದಿರುವುದಿಲ್ಲ.

**15)** ಅಭಿಯೋಜನಾ ಸಾಕ್ಷಿ-1 ಪಿರ್ಯಾದಿ ಹಾಗೂ ಪ್ರಾಸಾ-**2** ಪ್ರತ್ಯೇಕ್ಷ ಸಾಕ್ಷಿದಾರರು ಇದ್ದು. ಆದರೆ ಅವರು ನುಡಿದಿರುವಂತಹ ಸಾಕ್ಷ್ಯ ಹಾಗೂ ಕಡತದಲ್ಲಿರುವಂತಹ ದಾಖಲಾತಿಗಳು ಒಂದಕ್ಕೊಂದು ತದ್ವಿರುದ್ದವಾಗಿರುತ್ತವೆ. ಪ್ರಕರಣವನ್ನು ಗಮನಿಸಿದಾಗ ರಾಜಿಯಾಗಿದ್ದು ಕಂಡು ಬರುತ್ತದೆ. ಸದರಿ ರಾಜಿಯಲ್ಲಿ ನ್ಯಾಯಾಲಯವು ಮದ್ಯ ಪ್ರವೇಶಿಸುವುದು ಕಾನೂನಿನ ದೃಷ್ಟಿಯಿಂದ ಸಮಂಜಸ ಇರುವುದಿಲ್ಲ. ಆದ್ದರಿಂದ ಅಭಿಯೋಜನೆಯು ಆರೋಪಿತರ ಮೇಲಿನ ಅಪರಾಧವನ್ನು ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ವಿಫಲವಾಗಿದೆ ಅಂತಾ ಪರಿಗಣಿಸಿ, ಆರೋಪಿತರಿಗೆ ಸಂಶಯದ ಲಾಭವನ್ನು ನೀಡಿ ಅಂಶ ಸಂಖ್ಯೆ-1 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

**16)** **ಅಂಶ ಸಂಖ್ಯೆ 2 :** ಅಭಿಯೋಜನೆಯು ಆರೋಪಿತರ ಮೇಲಿನ ಅಪರಾಧವನ್ನು ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ವಿಫಲವಾಗಿದ್ದರಿಂದ ದೋಷಾರೋಪಣೆಗಳಿಂದ ಆರೋಪಿತರು ಬಿಡುಗಡೆಗೆ ಅರ್ಹನಿರುತ್ತಾರೆ ಅಂತಾ ಅಭಿಪ್ರಾಯಪಟ್ಟು, ಅಂಶ ಸಂಖ್ಯೆ-**1** ರಲ್ಲಿ ತೋರಿಸಿದ ಕಾರಣಗಳಿಂದಾಗಿ, ಈ ಕೆಳಗಿನಂತೆ ಅಂತಿಮ ಆದೇಶ ಮಾಡಲಾಗಿದೆ.

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ **248(1)** ರಡಿಯಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ ಆರೋಪಿತರನ್ನು ಭಾರತೀಯ ದಂಡ ಸಂಹಿತೆ ಕಲಂ. **447, 341, 323, 354(ಎ)(2), 504, 506** ಸಹಕಲಂ: **34** ರಡಿಯಲ್ಲಿ ಶಿಕ್ಷಿಸಲ್ಪಡುವ ದೋಷಾರೋಪಣೆಗಳಿಗೆ ನಿರ್ದೋಷಿಗಳು ಎಂದು ತೀರ್ಮಾನಿಸಿ ದೋಷಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತರು ನೀಡಿದ ಜಾಮೀನು ಪತ್ರ ರದ್ದಾಗತಕ್ಕದ್ದು.

(ಮೇಲಿನ ತೀರ್ಪನ್ನು ಶೀಘ್ರಲಿಪಿಗಾರಳಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ತಿದ್ದುಪಡಿ ಮಾಡಿ ಈ ದಿನ ದಿನಾಂಕ: **01** ನೇ ಜುಲೈ **2026** ರಂದು ತೆರೆದ ನ್ಯಾಯಾಲಯದಲ್ಲಿ ಉಚ್ಚರಿಸಲ್ಪಟ್ಟಿತ್ತು.)

(ನಾಗೇಶ ಪಾಟೀಲ)
ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಗಂಗಾವತಿ

## ::ಅನುಬಂಧ::

**ಅಭಿಯೋಜನೆ/ಆರೋಪಿತರ ಪರವಾಗಿ ವಿಚಾರಿಸಿಕೊಂಡ ಸಾಕ್ಷಿದಾರರ ವಿವರ**

**1)** ಅಭಿಯೋಜನೆ ಪರವಾಗಿ ವಿಚಾರಿಸಿಕೊಂಡ ಸಾಕ್ಷಿದಾರರ ವಿವರ

| | | |
|---|---|---|
| ಅಸಾ-**1 :** | ರೋಜಾ ಗಂಡ ಮಲ್ಲಿಕಾರ್ಜುನ | ಫಿರ್ಯಾದಿ ಸಾಕ್ಷಿ |
| ಅಸಾ-**2 :** | ಮಲ್ಲಿಕಾರ್ಜುನ ತಂದೆ ಮುದಕಪ್ಪ | ಪ್ರತ್ಯೇಕ್ಷ ಸಾಕ್ಷಿ |

**2)** ಆರೋಪಿತರ ಪರವಾಗಿ ವಿಚಾರಿಸಿಕೊಂಡ ಸಾಕ್ಷಿದಾರರ ವಿವರ

ಇಲ್ಲಾ

**3)** ನ್ಯಾಯಾಲಯದ ಪರವಾಗಿ ವಿಚಾರಿಸಿಕೊಂಡ ಸಾಕ್ಷಿದಾರರ ವಿವರ

ಇಲ್ಲಾ

**ಅಭಿಯೋಜನೆ/ಆರೋಪಿತರ ಪರವಾಗಿ ಗುರುತಿಸಿದ ದಾಖಲಾತಿಗಳ ವಿವರ**

**1)** ಅಭಿಯೋಜನೆ ಪರವಾಗಿ ಗುರುತಿಸಿದ ದಾಖಲಾತಿಗಳ ವಿವರ

| | | |
|---|---|---|
| 1. | ನಿಶಾನೆ ಪಿ-**1** | ಫಿರ್ಯಾದಿ |
| 2. | ನಿಶಾನೆ ಪಿ-**1(ಎ)** | ಪ್ರಾಸಾ-**1** ರವರ ಸಹಿ |
| 3. | ನಿಶಾನೆ ಪಿ-**2** | ಪ್ರಾಸಾ-**1** ರವರ ಪುರವಣಿ ಹೇಳಿಕೆ |
| 4. | ನಿಶಾನೆ ಪಿ-**3** | ಪ್ರಾಸಾ-2 ರವರ ಹೇಳಿಕೆ |

**2)** ಆರೋಪಿತರ ಪರವಾಗಿ ಗುರುತಿಸಿಕೊಂಡ ದಾಖಲೆಗಳ ವಿವರ

ಇಲ್ಲಾ

**3)** ನ್ಯಾಯಾಲಯದ ಪರವಾಗಿ ಗುರುತಿಸಿಕೊಂಡ ದಾಖಲೆಗಳ ವಿವರ

ಇಲ್ಲಾ

**4)** ಮುದ್ದೆಮಾಲಿನ/ಜಪ್ತಾದ ವಸ್ತುಗಳ ಬಗ್ಗೆ ವಿವರ

ಇಲ್ಲಾ

**(**ನಾಗೇಶ ಪಾಟೀಲ**)**

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಗಂಗಾವತಿ